**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೆ.ಎ. ತಿಪ್ಪೇಸ್ವಾಮಿ ಯವರ ನಿಯಮ 72 ಮೇರೆಗೆ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

***

**ಸೂಚನೆ:** ರಾಜ್ಯದ ಗಣಿ ಭಾಧಿತ ಮೂರು ಜಿಲ್ಲೆಗಳಾದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪರಿಸರ ಮನಶ್ಚೇತನಕ್ಕೆ ಮೀಸಲಾಗಿದ್ದ 24,000 ಕೋಟಿರೂಗಳ ಬಳಕೆ ಮಾಡಲು ಸುಪ್ರೀಂಕೋರ್ಟ್ ಬಹಳ ವರ್ಷಗಳ ನಂತರ ಅನುಮತಿ ನೀಡಿದೆ. ಭಾಧಿತ ಜಿಲ್ಲೆಗಳ ಜನ-ವಸತಿ ಪ್ರದೇಶಗಳಲ್ಲಿ ಸಮರ್ಪಕ ಕುಡಿಯುವ ನೀರು, ಸುಸಜ್ಜಿತ ರಸ್ತೆ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಕಾಮಗಾರಿಗಳು ಹಾಗೂ ಸಮಾನ್ಯ ಜನತೆ ಸಂಕಷ್ಟಗಳ ಸುಧಾರಣೆಗೆ ಒಳಗೊಂಡಿರುವ ಅಗತ್ಯವಾದ ಕ್ರಿಯಾ ಯೋಜನೆಯನ್ನು ಸಂಬಂಧಿಸಿದ ಇಲಾಖೆಗಳು ತಯಾರಿಸಿವೆ ಆದರೆ, ಈ ಕ್ರಿಯಾ ಯೋಜನೆಯಂತೆ ಪರಿಸರ ಮನಶ್ಚೇತನ ಕಾಮಗಾರಿಗಳನ್ನು ಇದುವರೆಗೂ ಕೈಗೆತ್ತಿಕೊಂಡಿಲ್ಲ. ಭಾಧಿತ ಪ್ರದೇಶಗಳಲ್ಲಿನ ಜನತೆ ಪರಿಸರ ದಕ್ಕೆಯಿಂದ ಉಂಟಾದ ಪರಿಣಾಮದಿಂದ ಬಳಲುತ್ತಿದಾರೆ, ಇಂತಹ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿ, ಸರ್ಕಾರದ ಗಮನ ಸೆಳೆಯಲು ಅವಕಾಶ ನೀಡಬೇಕೆಂದು ಕೋರುತ್ತೇವೆ.

**********

**ಉತ್ತರ:** ರಾಜ್ಯದಲ್ಲಿನ ಅಕ್ರಮ ಗಣಿಗಾರಿಕೆಗೆ ಕುರಿತಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ 562/2009 ರಲ್ಲಿ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಗಣಿಗಾರಿಕೆ ಪ್ರಭಾವಕ್ಕೊಳಗಾದ ಪ್ರದೇಶಗಳ ಪುನ:ಶ್ಚೇತನಕ್ಕಾಗಿ "ಗಣಿಗಾರಿಕೆಯ ಪ್ರಭಾವಕ್ಕೆ ಒಳಗಾದ ವಲಯಗಳಿಗೆ ಸಮಗ್ರ ಪರಿಸರ ಯೋಜನೆ"-Comprehensive Environment Plan for Mining Impact Zone (CEPMIZ)] ಎಂಬ ಯೋಜನೆಯನ್ನು ತಯಾರಿಸಿ ಸಲ್ಲಿಸುವಂತೆ ಹಾಗೂ ಯೋಜನೆಯ ತಯಾರಿ ಮತ್ತು ಉಸ್ತುವಾರಿಗಾಗಿ Special Purpose Vehicle (SPV) ಯೊಂದನ್ನು ಸ್ಥಾಪಿಸುವಂತೆ ಮಾನ್ಯ ನ್ಯಾಯಾಲಯವು ಸೂಚಿಸಿತ್ತು.

ಅದರಂತೆ, ಸರ್ಕಾರವು ರೂ. 24,996.71 ಕೋಟಿ ಅಂದಾಜಿನ CEPMIZ ಯೋಜನೆಯನ್ನು ತಯಾರಿಸಿ Central Empowered Committee (CEC) ಮುಖಾಂತರ ದಿನಾಂಕ 11.10.2018 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಸದರಿ ಯೋಜನೆಯನ್ನು 10 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿತ್ತು (ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ). ಪ್ರಸ್ತಾಪಿತ ಯೋಜನೆಗೆ ಅನುಮೋದಿಸುವಂತೆ ಕೇಂದ್ರ ಉನ್ನತಾಧಿಕಾರಸ್ಥ ಸಮಿತಿಯು (CEC) ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಶಿಫಾರಸ್ಸು ಮಾಡಿತ್ತು.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 21.04.2022 ರಂದು ಜರುಗಿದ ವಿಚಾರಣೆಯಲ್ಲಿ CEPMIZ ಯೋಜನೆಗೆ ತಾತ್ವಿಕ ಅನುಮೋದನ ನೀಡಿ ಸದರಿ ಯೋಜನೆಗಳ ಅನುಮೋದನೆ ಮತ್ತು ಉಸ್ತುವಾರಿಗಾಗಿ ಹಾಗೂ ಹಣಕಾಸಿನ ನಿರ್ವಹಣೆ ಬಗ್ಗೆ ನಿಗಾವಹಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಧೀಶರಾದ ಶ್ರೀ. ಸುದರ್ಶನ ರೆಡ್ಡಿಯವರನ್ನು ಮೇಲುಸ್ತುವಾರಿ ಪ್ರಾಧಿಕಾರವಾಗಿ ನೇಮಿಸಿದೆ. ಅಲ್ಲದೆ ಸದರಿ ಆದೇಶದಲ್ಲಿ CEC ಸ್ವಳಿಯವಾಗಿ ಯೋಜನೆಗಳಿಗೆ ಧನವಿನಿಯೋಗದ ಬಗ್ಗೆ ಪರಿಶೀಲಿಸಿ ಮೇಲುಸ್ತುವಾರಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸಬಹುದೆಂದು ಆದೇಶಿಸಿದೆ.

ಶ್ರೀ ಸುದರ್ಶನ ರೆಡ್ಡಿಯವರು ಮೇ 30, 2022ರ ರಂದು ಮೇಲುಸ್ತುವಾರಿ ಪ್ರಾಧಿಕಾರಿಯಾಗಿ KMERC ಯಲ್ಲಿ ಅಧಿಕಾರ ಸ್ವೀಕರಿಸಿ, ಮೊದಲಿಗೆ ಯೋಜನಾ ಪ್ರಸ್ತಾವನೆ ಸಲ್ಲಿಕೆಗೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ಮಾರ್ಗಸೂಚಿಯನ್ನು ನೀಡಿರುತ್ತಾರೆ.

ಮೇಲುಸ್ತುವಾರಿ ಪ್ರಾಧಿಕಾರವು ಜೂನ್ 2023 ರವರೆಗೆ ಒಟ್ಟು 9 ಬಾರಿ ಸಭೆ ನಡೆಸಿ, ರೂ. 7,634.96 ಕೋಟಿ ಅಂದಾಜಿನ ಒಟ್ಟು 317 ಯೋಜನಾ ಪ್ರಸ್ತಾವನೆಗಳನ್ನು ಅನುಮೋದಿಸಿದೆ. ಅನುಮೋದನೆಗೊಂಡ ಯೋಜನೆಗಳಿಗೆ ಇಲಾಖೆಗಳು ವಿಸ್ತೃತ ಯೋಜನಾ ವರದಿಗಳನ್ನು(DPR) ತಯಾರಿಸಿ ಇಲಾಖೆಯ ತಾಂತ್ರಿಕ ಅನುಮೋದನ ಪಡೆದು KMERC ಗೆ ಸಲ್ಲಿಸುತ್ತಿವೆ.

ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಸರ್ಕಾರವು ದಿನಾಂಕ 13.03.2023ರ ಆದೇಶದಲ್ಲಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವನ್ನು KMERC ಗೆ ಪ್ರತ್ಯಾಯೋಜಿಸಿದೆ. ಅಲ್ಲದೆ, ದಿನಾಂಕ 22.05.2023 ರ ಸುತ್ತೋಲೆಯಲ್ಲಿ ಯೋಜನೆ ಅನುಷ್ಠಾನದ ಬಗ್ಗೆ ಇಲಾಖೆಗಳಿಗೆ ವಿಧಿಸಿದ್ದ ಕೆಲವು ನಿರ್ಬಂಧಗಳಿಂದ CEPMIZ ಯೋಜನೆಗಳಿಗೆ ವಿನಾಯಿತಿ ನೀಡಿದೆ.

ಮೇಲಿನ 317 ಅನುಮೋದಿತ ಪ್ರಸ್ತಾವನೆಗಳ ಪೈಕಿ, ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ರೂ. 1,160.60 ಕೋಟಿ ಅಂದಾಜಿನ 61 ಯೋಜನೆಗಳಿಗೆ KMERC ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

ಇವುಗಳಲ್ಲಿ, ಕರ್ನಾಟಕ ಅರಣ್ಯ ಇಲಾಖೆಯ ಯೋಜನೆಗಳಡಿಯಲ್ಲಿ ಒಂದು ಯೋಜನೆಯ 6 ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಕೌಶಲ್ಯಾಭಿವೃದ್ಧಿ ಯೋಜನೆಯಡಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (**Government Tool Room and Training Centre**) ಯೋಜನೆಗಳ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರುಗಳಲ್ಲಿ ಅನುಷ್ಠಾನಕ್ಕಾಗಿ 4 ಕಾರ್ಯಾದೇಶ ನೀಡಲಾಗಿರುತ್ತದೆ. ಬಳ್ಳಾರಿ ಮತ್ತು ಚಿತ್ರದುರ್ಗದ 2 ಯೋಜನೆಗಳ ಕೆಲಸ ಪ್ರಾರಂಭಗೊಂಡು ಅಡಿಪಾಯದ ಕೆಲಸ ಪ್ರಗತಿಯಲ್ಲಿರುತ್ತದೆ. ಉಳಿದ 2 ಯೋಜನೆಗಳು ಪ್ರಾರಂಭಗೊಳ್ಳಬೇಕಿದೆ.

ಕರ್ನಾಟಕ e-procurement portal ನ್ನು ಉನ್ನತೀಕರಣ (version 2.0ಗೆ) ಗೊಳಿಸುತ್ತಿದ್ದುದರಿಂದ ಕೆಲವೊಂದು ಇಲಾಖೆಗಳು ಟೆಂಡರ್ upload ಮಾಡಲು ಸಾಧ್ಯವಾಗಿರುವುದಿಲ್ಲ.

ಅಲ್ಲದೆ, ಮಾರ್ಚ್ 29 ರಿಂದ ಮೇ 10 ರವರೆಗೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ಸದರಿ ಸಮಯದಲ್ಲಿ KMERC ಯಾವುದೇ ಯೋಜನೆ ಅನುಷ್ಠಾನ ಅಥವಾ ಯೋಜನಾ ಅನುಮೋದನೆ ಪ್ರಕ್ರಿಯೆ ಕೈಗೊಂಡಿರುವುದಿಲ್ಲ.

ಮಾನ್ಯ ಸರ್ವೋಚ್ಚ ನ್ಯಾಯಾಲಯ ದಿನಾಂಕ 22.02.2023ರಂದು ನಡೆದ ವಿಚಾರಣಾ ವೇಳೆಯಲ್ಲಿ CEPMIZ ಯೋಜನೆ ಪ್ರಗತಿ ಸಾಧಿಸಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮ ಹಾಗೂ ಎಷ್ಟು ಸಮಯದ ಒಳಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂಬ ಬಗ್ಗೆ ರಾಜ್ಯ ಸರ್ಕಾರದ ವತಿಯಿಂದ ಅಫಿಡವಿಟ್ ಸಲ್ಲಿಸುವಂತೆ ಆದೇಶದಲ್ಲಿ ಸೂಚಿಸಿದೆ.

ಅದರಂತೆ 2023-24 ನೇ ಸಾಲಿನಲ್ಲಿ ರೂ. 9,000 ಕೋಟಿ ಅಂದಾಜಿನ ಯೋಜನೆಗಳಿಗೆ ಮೇಲುಸ್ತುವಾರಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ, ರೂ. 7,000 ಕೋಟಿ DPR ಗಳಿಗೆ ಅನುಮೋದನೆ ಹಾಗೂ ಯೋಜನೆ ಅನುಷ್ಠಾನದ ಬಾಬ್ತು ರೂ. 1,000 ಕೋಟಿ ಯೋಜನೆ ವೆಚ್ಚವಾಗುವುದಾಗಿ ಸರ್ಕಾರದ ವತಿಯಿಂದ ಅಫಿಡವಿಟ್ ಸಲ್ಲಿಸಲಾಗಿದೆ. ಪ್ರಸ್ತುತ ಯೋಜನೆಯ ಪ್ರಗತಿಯ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.

ಪ್ರಸ್ತಾಪಿತ ಯೋಜನೆ ಅನುಷ್ಠಾನ ಪ್ರಕ್ರಿಯೆ ವಿವಿಧ ಹಂತದಲ್ಲಿದ್ದು, ಯೋಜನೆ ಅನುಷ್ಠಾನದ ವೇಗ ಹೆಚ್ಚಿಸಲು ಸಂಬಂಧಿಸಿದ ಇಲಾಖೆಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ಸಿಐ 70 ಎಂಎಂಎಂ 2023**

S. S. Mallikarjun

**(ಎಸ್.ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

| | | | | | ಅನುಬಂಧ-1 |
|---|---|---|---|---|---|
| ಕ್ರಮ ಸಂಖ್ಯೆ | ವಲಯಗಳು /ಉಪವಲಯಗಳು. (Sectors & Sub-Sectors) | ಬಳ್ಳಾರಿ | ಚಿತ್ರದುರ್ಗ | ತುಮಕೂರು | ಒಟ್ಟು ಮೊತ್ತ ರೂ. ಕೋಟಿಗಳು |
| 1 | **ಪರಿಸರ ಪುನ:ಸ್ಥಾಪನೆ** | | | | |
| a | ಅರಣ್ಯ | 1,557.79 | 540.83 | 500.52 | 2,599.14 |
| b | ಪರಿಸರ ಮಾಲಿನ್ಯ | 27.00 | 14.81 | 14.81 | 56.61 |
| | ಒಟ್ಟು | 1,584.79 | 555.64 | 515.33 | 2,655.75 |
| 2 | **ಕೃಷಿ ಮತ್ತು ಇತರೆ** | | | | |
| a | ಕೃಷಿ | 442.45 | 324.85 | 287.10 | 1,054.40 |
| b | ತೋಟಗಾರಿಕೆ | 64.73 | 17.06 | 14.03 | 95.82 |
| c | ರೇಷ್ಮೆ | 0.00 | 3.50 | 3.00 | 6.50 |
| d | ಪಶು ಸಂಗೋಪನೆ | 284.76 | 38.00 | 22.20 | 344.96 |
| e | ಮೀನುಗಾರಿಕೆ | 89.99 | 7.63 | 3.75 | 101.37 |
| | ಒಟ್ಟು | 8,81.93 | 391.04 | 330.08 | 1,603.05 |
| 3 | ಕುಡಿಯುವ ನೀರು/ನೈರ್ಮಲ್ಯ ಮತ್ತು ಗ್ರಾಮೀಣ ರಸ್ತೆಗಳು | | | | |
| a | ಕುಡಿಯುವ ನೀರು | 2569.98 | 661.00 | 236.88 | 3,467.86 |
| b | ನೈರ್ಮಲ್ಯ | 374.00 | 37.00 | 13.00 | 424.00 |
| c | ಗ್ರಾಮೀಣ ರಸ್ತೆಗಳು | 520.72 | 280.68 | 236.64 | 1,038.04 |
| | ಒಟ್ಟು | 3,464.70 | 978.68 | 486.52 | 4,929.90 |
| 4 | **ಆರೋಗ್ಯ** | | | | |
| a | ಜಿಲ್ಲಾ ಆಸ್ಪತ್ರೆ | 286.17 | 114.04 | 131.90 | 532.11 |
| b | ತಾಲ್ಲೂಕ/ಸಿ.ಹೆಚ್.ಸಿ/ಪಿ.ಹೆಚ್.ಸಿ/ ಆಯುಷ್/ರಕ್ತ ನಿಧಿ, ಇತರೆ | 151.17 | 141.90 | 77.77 | 370.84 |
| c | ವಿಶೇಷ ಆರೋಗ್ಯ ಕೇಂದ್ರ, ಸಂಡೂರು | 301.63 | | | 301.63 |
| d | ಮೆಡಿಕಲ್ ಕಾಲೇಜು, ಬಳ್ಳಾರಿ | 711.20 | 0 | 0 | 711.20 |
| | ಒಟ್ಟು | 1,450.17 | 255.94 | 209.67 | 1,915.78 |
| 5 | **ಶಿಕ್ಷಣ** | | | | |
| a | ಶಿಕ್ಷಣ | 413.49 | 280.58 | 186.62 | 880.69 |
| b | ಪದವಿ ಪೂರ್ವ ಶಿಕ್ಷಣ | 230.00 | 50.00 | 5.66 | 285.66 |
| | ಒಟ್ಟು | 643.49 | 330.58 | 192.28 | 1,166.35 |
| 6 | **ದುರ್ಬಲ ವರ್ಗಗಳ ಅಭಿವೃದ್ಧಿ** | | | | |
| a | ಮಹಿಳಾ ಮತ್ತು ಮಕ್ಕಳ ಕಲ್ಯಾಣ | 398.87 | 94.03 | 110.78 | 603.68 |
| b | ಸಮಾಜ ಕಲ್ಯಾಣ | 200.00 | 50.00 | 51.94 | 301.94 |
| c | ಹಿಂದುಳಿದ ವರ್ಗ | 78.03 | 25.31 | 25.00 | 128.34 |
| d | ಅಲ್ಪಸಂಖ್ಯಾತರ ಅಭಿವೃದ್ಧಿ | 18.70 | 19.20 | 10.70 | 48.60 |
| | ಒಟ್ಟು | 695.60 | 188.54 | 198.42 | 1,082.56 |
| 7 | **ವಸತಿ** | 1,027.00 | 106.88 | 60.00 | 1,193.88 |
| 8 | **ಕೌಶಲ್ಯಾಭಿವೃದ್ಧಿ** | 436.19 | 70.79 | 31.27 | 538.25 |
| 9 | ಪ್ರವಾಸೋದ್ಯಮ | 148.00 | 34.00 | 7.00 | 189.00 |
| 10 | ನೀರಾವರಿ | 799.00 | 154.70 | 53.00 | 1,006.70 |
| 11 | ಮೂಲಭೂತ ಸೌಕರ್ಯ | 734.99 | 105.29 | 44.08 | 884.36 |
| 12 | ರಸ್ತೆ ಮತ್ತು ಸಂಪರ್ಕ | 1,512.55 | 620.22 | 426.40 | 2,559.17 |
| 13 | ರೈಲು ಮೂಲ ಸೌಕರ್ಯ | | | | 5,271.96 |
| | ಒಟ್ಟು | **13,378.41** | **3,792.30** | **2,554.05** | **24,996.71** |

25/06/2023

Managing Director
Karnataka Mining Environmen
Restoration Corporation

## ಮೇಲುಸ್ತುವಾರಿ ಪ್ರಾಧಿಕಾರದಿಂದ ಅನುಮೋದನೆಗೊಂಡ 317 ಯೋಜನೆಗಳ ಇಲಾಖಾವಾರು ತಖ್ತೆ:

ಅನುಬಂಧ-2

| ಕ್ರ. ಸಂಖ್ಯೆ | ಇಲಾಖೆಗಳು | ಬಳ್ಳಾರಿ | | ಚಿತ್ರದುರ್ಗ | | ತುಮಕೂರು | | ವಿಜಯನಗರ | | ಒಟ್ಟು | |
|---|---|---|---|---|---|---|---|---|---|---|---|
| | | ಯೋಜನೆಗಳ ಸಂಖ್ಯೆ | ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳ ಸಂಖ್ಯೆ | ಒಟ್ಟು ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳ ಸಂಖ್ಯೆ | ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳ ಸಂಖ್ಯೆ | ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳು | ಒಟ್ಟು ಮೊತ್ತ ರೂ. ಕೋಟಿ |
| 1. | ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ | 6 | 146.63 | 4 | 25.81 | 3 | 17.75 | 2 | 44.98 | 15 | 235.17 |
| 2. | ಪ್ರೌಢಶಿಕ್ಷಣ ಇಲಾಖೆ | 1 | 19.99 | | 0 | | 0 | | 0 | 1 | 19.99 |
| | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ | 1 | 19.68 | 1 | 32.71 | 1 | 13.01 | | 0 | 3 | 65.4 |
| 3. | ವೈದ್ಯಕೀಯ ಶಿಕ್ಷಣಇಲಾಖೆ | 1 | 121.83 | | 0 | | 0 | | 0 | 1 | 121.83 |
| 4. | ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ | | 0 | 5 | 15.26 | | 0 | | 0 | 5 | 15.26 |
| 5. | ಪದವಿ ಪೂರ್ವ ಶಿಕ್ಷಣ ಇಲಾಖೆ | 1 | 103.35 | 1 | 40 | 1 | 4.53 | | 0 | 3 | 147.88 |
| 6. | ಸಾರ್ವಜನಿಕ ಶಿಕ್ಷಣ ಇಲಾಖೆ | 11 | 231.64 | 16 | 224.35 | 6 | 149.28 | 2 | 27.9 | 35 | 633.17 |
| 7. | ಸಾರ್ವಜನಿಕ ಗ್ರಂಥಾಲಯ ಇಲಾಖೆ | 1 | 1.36 | 1 | 8.22 | | 0 | 1 | 2.97 | 3 | 12.55 |
| 8. | ಕೌಶಾಲ್ಯಾಭಿವೃದ್ಧಿ, ವಾಣಿಜ್ಯೋದ್ಯಮ ಹಾಗೂ ಜೀವನೋಪಾಯ ಇಲಾಖೆ | 1 | 24.96 | 1 | 24.11 | 1 | 12.93 | 1 | 19.65 | 4 | 81.64 |
| 9. | ತಾಂತ್ರಿಕ ಶಿಕ್ಷಣ ಇಲಾಖೆ | 1 | 12.67 | | 0 | | 0 | | 0 | 1 | 12.67 |
| 10. | ಬುಡಕಟ್ಟು ಕಲ್ಯಾಣ ಇಲಾಖೆ | 2 | 36.55 | | 0 | | 0 | | 0 | 2 | 36.55 |
| 11. | ಜಲಾನಯನ ಅಭಿವೃದ್ಧಿ ಇಲಾಖೆ | 7 | 142.05 | 12 | 237.92 | 11 | 207.21 | 7 | 114.47 | 37 | 701.65 |
| 12. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 2 | 143.32 | 4 | 52.21 | 3 | 60.89 | 1 | 50.68 | 10 | 307.1 |
| 13. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 2 | 81.87 | 4 | 113.52 | | 0 | | 0 | 6 | 195.39 |
| 14. | ಮೀನುಗಾರಿಕೆ ಇಲಾಖೆ | 7 | 63.47 | 1 | 6.12 | 1 | 3 | 1 | 8.4 | 10 | 80.99 |
| 15. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 3 | 28.96 | | 0 | | 0 | 4 | 68.12 | 7 | 97.08 |
| 16. | ತೋಟಗಾರಿಕಾ ಇಲಾಖೆ | 3 | 25.5 | 1 | 3.2 | | 0 | | 0 | 4 | 28.7 |
| 17. | ಅರಣ್ಯ ಇಲಾಖೆ | 14 | 340.33 | 15 | 306.95 | 16 | 321.68 | 20 | 235.69 | 65 | 1204.65 |

| ಕ್ರ. ಸಂಖ್ಯೆ | ಇಲಾಖೆಗಳು | ಬಳ್ಳಾರಿ | | ಚಿತ್ರದುರ್ಗ | | ತುಮಕೂರು | | ವಿಜಯನಗರ | | ಒಟ್ಟು | |
|---|---|---|---|---|---|---|---|---|---|---|---|
| | | ಯೋಜನೆಗಳ ಸಂಖ್ಯೆ | ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳ ಸಂಖ್ಯೆ | ಒಟ್ಟು ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳ ಸಂಖ್ಯೆ | ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳ ಸಂಖ್ಯೆ | ಯೋಜನಾ ವೆಚ್ಚ (ಕೋಟಿಗಳಲ್ಲಿ) | ಯೋಜನೆಗಳು | ಒಟ್ಟು ಮೊತ್ತ ರೂ. ಕೋಟಿ |
| 18. | ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ | 1 | 3.49 | | 0 | | 0 | | 0 | 1 | 3.49 |
| 19. | ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1 | 270.64 | | 0 | | 0 | | 0 | 1 | 270.64 |
| 20. | ಗಣಿ ಮತ್ತು ಭೂವಿಜ್ಞಾನ ಇಲಾಖೆ | | 0 | | 0 | | 0 | 1 | 2.27 | 1 | 2.27 |
| 21. | ಸಣ್ಣ ನೀರಾವರಿ ಇಲಾಖೆ | 3 | 217.53 | 4 | 116.68 | 3 | 42.4 | 4 | 132 | 14 | 508.61 |
| 22. | ಪಂಚಾಯತ್‌ರಾಜ್ ಇಂಜಿನೀಯರಿಂಗ್ ಇಲಾಖೆ | | 0 | 9 | 211.47 | 7 | 189.31 | | 0 | 16 | 400.78 |
| 23. | ಲೋಕೋಪಯೋಗಿ ಇಲಾಖೆ | 19 | 621 | 15 | 496 | 19 | 341.12 | | 0 | 53 | 1458.12 |
| 24. | ನೈರುತ್ಯ ರೈಲ್ವೆ | 1 | 276.99 | | 0 | | 0 | 1 | 258.72 | 2 | 535.71 |
| 25. | ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ | | 0 | 1 | 9.15 | | 0 | | 0 | 1 | 9.15 |
| 26. | ನಗರಾಭಿವೃದ್ಧಿ ಇಲಾಖೆ | 1 | 5.97 | | 0 | | 0 | | 0 | 1 | 5.97 |
| 27. | ಜಲಸಂಪನ್ಮೂಲ ಇಲಾಖೆ | 2 | 68.99 | | 0 | | 0 | | 0 | 2 | 68.99 |
| 28. | ಜಿಲ್ಲಾ ಪಂಚಾಯತ್ | 4 | 260.95 | 9 | 112.61 | | 0 | | 0 | 13 | 373.56 |
| ಒಟ್ಟು ಮೊತ್ತ | | **96** | **3269.72** | **104** | **2036.29** | **72** | **1363.11** | **45** | **965.85** | **317** | **7634.97** |

[signature] 28/06/2023

Managing Director
Karnataka Mining Environment
Restoration Corporation